**ಕರ್ನಾಟಕ ಸರ್ಕಾರ**

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ,*
*ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಇ-ಮೇಲ್: commissioner.pue@gmail.com ಫೋನ್:080-23561944ಫ್ಯಾಕ್ಸ್: 23361852.

ಸಂಖ್ಯೆ: ಪಿಯುಇ/ಕಟ್ಟಡ-03/ಮೂ.ಸೌ/ಮಾಹಿತಿ-01/2018-19 ದಿನಾಂಕ: 19-4-2018

**'ಆಧ್ಯತೆಯ ಮೇರೆಗೆ'**

ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
---------------ಜಿಲ್ಲೆ
---------------

ವಿಷಯ: 2017-18ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ತರಗತಿ ಪೀಠೋಪಕರಣ (ಡೆಸ್ಕ್) ಮತ್ತು ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಬಿಡುಗಡೆ ಮಾಡಿದ ಅನುದಾನಕ್ಕೆ ಲೆಕ್ಕಶೀರ್ಷಿಕೆವಾರು ಪ್ರತ್ಯೇಕವಾಗಿ ಬಳಕೆ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಇದೇ ಸಮಸಂಖ್ಯೆಯ ಪತ್ರ ದಿನಾಂಕ:10-4-2018

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅವಶ್ಯಕತೆ ಹಾಗೂ ಕೋರಿಕೆಗೆ ಅನುಗುಣವಾಗಿ ವಿವಿಧ ಯೋಜನೆಗಳಡಿ ಕಟ್ಟಡ ನಿರ್ಮಾಣ. ಹೆಚ್ಚುವರಿ ತರಗತಿ ಕೊಠಡಿ. ಪ್ರಯೋಗಾಲಯ ಕೊಠಡಿ. ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಹಾಗೂ ತರಗತಿ ಪೀಠೋಪಕರಣಗಳು ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಆದಾಗ್ಯೂ ಕೆಲ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಪಾಳಿ ಪದ್ಧತಿಯಲ್ಲಿ ಪ್ರಾಥಮಿಕ/ಪ್ರೌಢ ಶಾಲಾ ಕಟ್ಟಡದಲ್ಲಿ ನಡೆಯುತ್ತಿರುವುದು ಕಂಡು ಬಂದಿರುತ್ತದೆ.

2018-19ನೇ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಸಂಬಂಧ ಕ್ರಿಯಾಯೋಜನೆಯನ್ನು ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಬೇಕಾಗಿರುವುದರಿಂದ ಈಗಾಗಲೇ ಇಲಾಖೆಯಿಂದ ವಿವಿಧ ಯೋಜನೆಗಳಡಿ. ಸರ್ಕಾರದಿಂದ ಅನುಮೋದನೆಗೊಂಡು ಮಂಜೂರಾಗಿಅನುಷ್ಠಾನಗೊಂಡಿರುವ/ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳು/ಬಳಕೆಮಾಡಿಕೊಳ್ಳುತ್ತಿರುವ ಹೆಚ್ಚುವರಿ ಪ್ರಾಥಮಿಕ ಮತ್ತು ಪ್ರೌಢಶಾಲಾ **ಕೊಠಡಿಗಳು** ಸೇರಿದಂತೆ ಅನುಬಂಧದಲ್ಲಿ **ಕೋರಿರುವ** ವಿವರಗಳನ್ನು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳ ಕ್ರೋಢೀಕೃತ ಮಾಹಿತಿಯನ್ನು ಒಳಗೊಂಡಿರುವ ಒಂದು **ಹಾರ್ಡ್ ಮತ್ತು ಸಾಫ್ಟ್ ಕಾಪಿಯನ್ನು(ಎಕ್ಸೆಲ್‌ನಲ್ಲಿ) 'ಜಂಟಿ ನಿರ್ದೇಶಕರು'**

**ಮೂಲಭೂತ ಸೌಲಭ್ಯ ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು**. ಇವರಿಗೆ ಮುದ್ದಾಂ ದಿನಾಂಕ:25–4–2018ರೊಳಗೆ ತಲುಪಿಸಲು ಉಲ್ಲೇಖ(2)ರ ಪತ್ರದಲ್ಲಿ ಸೂಚಿಸಲಾಗಿದೆ.

ಹಾಗೂ ಇದರ ಜೊತೆಗೆ 2017–18ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ತರಗತಿ ಪೀಠೋಪಕರಣಗಳನ್ನು (ಡೆಸ್ಕ್) ಹಾಗೂ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಬಿಡುಗಡೆ ಮಾಡಿದ ಅನುದಾನಕ್ಕೆ ಲೆಕ್ಕಶೀರ್ಷಿಕೆವಾರು, ಕಾಲೇಜುವಾರು ಪ್ರತ್ಯೇಕವಾಗಿ ನಿಗಧಿತ ನಮೂನೆಯಲ್ಲಿ FORM 'C' OF KFC (ARTICLE-187A) ಬಳಕೆ ಪ್ರಮಾಣ ಪತ್ರವನ್ನು ಕಳುಹಿಸಲು ಈ ಮೂಲಕ ಸೂಚಿಸಿದೆ.

19/4/18

ಜಂಟಿನಿರ್ದೇಶಕರು
(ಮೂಲಭೂತ ಸೌಲಭ್ಯಶಾಖೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

C:\Users\admin\Desktop\Savitha\requirment.docx